2) ಶ್ರೀರಂಗ ಅಣೆ

3) ರಂಗಮಾರೇನಕಲ್‌ಕೆರೆ – ತನಿಖಾ ಹಂತದಲ್ಲಿದೆ

4) ರಂಗಪ್ಪ ಡ್ಯಾಂ ಕೆರೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮ

2246 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು? ತಾಲ್ಲೂಕುವಾರು ವಿವರ ನೀಡುವುದು)

ಆ) ಇವುಗಳಲ್ಲಿ ಹೂಳು ತುಂಬಿರುವ ಕೆರೆಗಳು ಎಷ್ಟೆಂದು ಗುರುತಿಸಲಾಗಿದೆಯೆ; (ತಾಲ್ಲೂಕಿನ ಪ್ರತಿಯೊಂದರ ಹೆಸರನ್ನು ತಿಳಿಸುವುದು)

ಇ) ಈ ಕೆರೆಗಳ ಹೂಳನ್ನು ತೆಗೆಯಲು ಸರ್ಕಾರದವರು ಯೋಜನೆಯನ್ನು ತಯಾರಿಸಿದ್ದಾರೆಯೇ;

ಈ) ಹಾಗಿದ್ದಲ್ಲಿ ಈ ಯೋಜನೆಗಾಗಿ ಒದಗಿಸಿರುವ ಮೊತ್ತವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) 1026 ತಾಲ್ಲೂಕುವಾರು ವಿವರ ಕೆಳಗಿಂತಿದೆ:

1)	ಮಾಗಡಿ	159
2)	ನೆಲಮಂಗಲ	154
3)	ಹೊಸಕೋಟಿ	145
4)	ದೇವನಹಳ್ಳಿ	95
5)	ದೊಡ್ಡಬಳ್ಳಾಪುರ	150
6)	ಕನಕಪುರ	138
7)	ರಾಮನಗರಂ	77
8)	ಚನ್ನಪಟ್ಟಣ	108
	ಒಟ್ಟು	1026

ಆ) ಇಲ್ಲ

ಇ) ಕೆಲವು ಕೆರೆಗಳಲ್ಲಿನ ಭಾಗಶಃ ಹೂಳನ್ನು ತೆಗೆಯಲು ಯೋಜನೆಯನ್ನು ತಯಾರಿಸಲಾಗಿದೆ.

ಈ) ಯಾವ ಮೊತ್ತವನ್ನು ಒದಗಿಸಿಲ್ಲ.

ವಿಜಾಪುರ ತಾಲ್ಲೂಕಿನಲ್ಲಿ ಕೆರೆಗಳ ಮರಸ್ತಿ

1648 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳೆಷ್ಟು; ಮತ್ತು ಯಾವುವು;